ಅಕ್ಕ್ಯೆರ್ ಮಾಡಿಕೊಂಡು ಅದಕ್ಕೆ ಹಣವನ್ನು ಕಟ್ಟಬೇಕು, ಆ ನಂತರ ಆ ಜಾಗದಲ್ಲಿ ಸ್ಟೆಟುಗಳನ್ನು ಎಂಗಡಿಸಿ ಅದನ್ನು ಜನಗಳಿಗೆ ಕೊಟ್ಟು ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಜನಗಳಿಗೆ ಅನುಕೂಲ ಮಾಡಿಕೊಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಂಚಾಯತಿಯಲ್ಲ ಹಣ ಇರುವುದಿಲ್ಲ. ಕೆಲವು ಜಮೀನಿನ ವಿಷಯದಲ್ಲಿ ಜಗಳ ಇರುತ್ತದೆ. ಆದ್ದರಿಂದ ಜಾಗ ಬೇಕು ಎಂದು ಹೇಳಿದರೂ ಅವರು ಒಪ್ಪುವುದಿಲ್ಲ. ಸಾಮಾನ್ಯವಾಗಿ ಪಂಚಾಯತಿಯ ಚೇರ್ಮನರು, ಗೌಡರು ಮತ್ತು ಶ್ಯಾನುಭೋಗರೇ ಇರುತ್ತಾರೆ. ಅಲ್ಲಿ ಅವರದೇ ಭೂಮಿ ಇರುತ್ತದೆ. ಆದ್ದರಿಂದ ಅವರು ಆ ಭೂಮಿಯನ್ನು ಅಕ್ಕ್ಯೆರ್ ಮಾಡಿಕೊಳ್ಳುವುದಕ್ಕೆ ಒಪ್ಪುವುದಿಲ್ಲ. ಆಗ ಪಂಚಾಯತಿಯವರು ಅದು ಬೇಕಾಗಿಲ್ಲ ಎಂದು ಬರೆಯುತ್ತಾರೆ. ಆಂಥಾ ಸಂದರ್ಭದಲ್ಲಿ ಸರ್ಕಾರದವರೇ ಆ ಭೂಮಿಯನ್ನು ಅಕ್ಕ್ಯೆರ್ ಮಾಡಿಕೊಂಡು ಅಮೇಲೆ ಅದನ್ನು ಜನಗಳಿಗೆ ಕೊಡಬೇಕಾಗುತ್ತದೆ.

Appointment of Non-official persons as Government Nominates in the Board of Directors of several private industrial undertakings.

*Q.—260. Sri GANGADHAR NAMOSHI (Gulbarga).—

Will the Government be pleased to state :—

(*a*) whether they have appointed non-official persons as Government nominees, in the Board of Directors of the following private Industrial undertakings, namely, A.C.C. Shahbad, Binny Mills, Bangalore, Cement Factory at Bagalkot and Dandeli Paper Mills ;

(*b*) if so, the details regarding the number and names of persons so appointed ?

A.—Sri K. MALLAPPA (Minister for Industries and Commerce).—

(*a*) Yes. Only in respect of the Associated Cement Company Ltd., Shahbad.

(*b*) Sri Mohamad Ali has been nominated on the Board of the Associated Cement Company Ltd., Shahbad.

ಶ್ರೀ ಗಂಗಾಧರ ನಾಮೋಷಿ.—ಸ್ವಾಮಿ, ಬೇರೆ ಯಾವ ಕೈಗಾರಿಕೆಗಳಲ್ಲೂ ಸರ್ಕಾರದವರ ಪರವಾಗಿ ನಾನ್ ಅಫಿಷಿಯಲ್ ಮೆಂಬರು ಇಲ್ಲ. ಆದರೆ ಷಹಾಬಾದ್‌ನಲ್ಲಿರುವ ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಯ ಆಡಳಿತ ಮಂಡಲಿಗೆ ನಾನ್ ಅಫಿಷಿಯಲ್ ಮೆಂಬರನ್ನು ನೇಮಕ ಮಾಡಿದ್ದಾರೆ ಅದಕ್ಕೆ ಕಾರಣವೇನು ?

† ಶ್ರೀ ಕೆ. ಮಲ್ಲಪ್ಪ.—ಈಗ ಬಿನ್ನಿ ಮಿಲ್ಲಿಗೆ ಮಾತ್ರ ಡೈರೆಕ್ಟರನ್ನು ನಾಮಕರಣ ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರ ಇದೆ. ಬಾಗಲಕೋಟೆಯಲ್ಲಿರುವ ಸಿಮೆಂಟ್ ಕಾರ್ಖಾನೆಗೆ ಮತ್ತು ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಗಳಿಗೆ ಡೈರೆಕ್ಟರನ್ನು ಸರ್ಕಾರದವರು ನಾಮಕರಣ ಮಾಡತಕ್ಕ ಅಧಿಕಾರವಿಲ್ಲ. ಈಗ ಬಿನ್ನಿ ಮಿಲ್ಲಿಗೆ ಚೆಕ್ಸ್‌ಟೈಲ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಶೇಷಾದ್ರಿ ಎಂಬುವರನ್ನೂ ಮತ್ತು ಸಿರಿಕಲ್ಚರ್ ಮತ್ತು ಸಿಲ್ಕ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಗುಂಡೂರಾಜ್ ಎನ್ನುವವರನ್ನೂ ನಾಮಕರಣ ಮಾಡಿದೆ. ಮತ್ತು ಗುಲ್ಬರ್ಗಾ ಡಿಸ್ಟ್ರಿಕ್ಟಿನ ಷಹಾಬಾದ್‌ನಲ್ಲಿರುವ ಸಿಮೆಂಟ್ ಕಂಪೆನಿಗೆ ಶ್ರೀ ಮಹಮದಾಲಿಯವರು ಗುಲ್ಬರ್ಗಾ ಡಿಸ್ಟ್ರಿಕ್ಟಿನ ಒಬ್ಬ ಪಬ್ಲಿಕ್ ವರ್ಕರ್ ಮತ್ತು ಜನರ ಕಷ್ಟ ನುಖಗಳನ್ನು ಚೆನ್ನಾಗಿ ಅರಿತುಕೊಂಡಿರತಕ್ಕವರು ಎಂದು ಭಾವಿಸಿ ಅವರನ್ನು ಅಲ್ಲಿಗೆ ನಾಮಕರಣ ಮಾಡಿದೆ.

Sri B. P. KADAM.—Is this Sri Mohamed Ali the same gentleman who is the President of the M. P. C. C. ?

† Indicates that the remarks or speeches have not been revised by the member concerned.

Sri K. MALLAPPA.—He has been appointed because he is a gentleman from Gulbarga and a public worker of Gulbarga District.

ಶ್ರೀ ಗಂಗಾಧರ ನಾಮೋಷಿ.—ಶ್ರೀ ಮಹಮದಾಲಯವರನ್ನು ಅಲ್ಲಿಗೆ ನಾಮಕರಣ ಮಾಡುವುದಕ್ಕಿಂತ ಮೊದಲು ಅಲ್ಲಿ ಬೋರ್ಡ್ ಆಫ್ ಡೈರೆಕ್ಟರಲ್ಲಿ ಯಾರು ಇದ್ದರು ?

ಶ್ರೀ ಕೆ. ಮಲ್ಲಪ್ಪ.—ಅದಕ್ಕಿಂತ ಮುಂಚೆ ಶ್ರೀ ನಾರಾಯಣಸ್ವಾಮಿ ಎಂಬುವರು ಇದ್ದರು.

Sri B. P. KADAM.—Will this nomination not adversely affect the work of the President of M. P. C. C. ?

Mr. SPEAKER.—It is disallowed. We are not concerned with it here.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಅಮ್ಮಸಂದ್ರದ ಸಿಮೆಂಟ್ ಫ್ಯಾಕ್ಟರಿಯಲ್ಲಿ ಸರ್ಕಾರದವರು ಷೇರ್ ಹಾಕಿದ್ದಾರೆಂದು ಗೊತ್ತಾಯಿತು. ಅಲ್ಲಿ ಸರ್ಕಾರದ ಪ್ರತಿನಿಧಿಗಳು ಯಾರಾದರೂ ಇದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಅಲ್ಲಿ ಸರ್ಕಾರದ ಪ್ರತಿನಿಧಿ ಇದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಯಾರು ?

ಶ್ರೀ ಕೆ. ಮಲ್ಲಪ್ಪ.—ಜಾಯಿಂಟ್ ಡೈರೆಕ್ಟರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್.

ಶ್ರೀ ಗಂಗಾಧರ ನಾಮೋಷಿ.—ಈಗ ಷಹಬಾದಿನಲ್ಲಿರುವ ಸಿಮೆಂಟ್ ಕಂಪೆನಿಗೆ ನಾನ್ ಅಫಿಷಿಯಲ್ ಮೆಂಬರನ್ನು ನಾಮಕರಣ ಮಾಡಿದ್ದೀರಿ, ಮೊದಲು ಸರ್ಕಾರದ ಅಧಿಕಾರಿಗಳನ್ನು ಇದರಲ್ಲಿ ನಾಮಕರಣ ಮಾಡಿದ್ದರಿಂದ ಅವರ ಟಿ. ಎ. ಡಿ. ಎ. ಮತ್ತು ಸಿಟಿಂಗ್ ಫೀಜು ಇತ್ಯಾದಿಗಳ ಬಗ್ಗೆ ಸರ್ಕಾರಕ್ಕೆ ಎಷ್ಟೋ ಆದಾಯ ಆಗುತ್ತಿತ್ತು. ಈಗ ನಾನ್ ಅಫಿಷಿಯಲ್ ಸದಸ್ಯರನ್ನು ಅಲ್ಲಿಗೆ ನಾಮಕರಣ ಮಾಡಿರುವುದರಿಂದ ಸರ್ಕಾರಕ್ಕೆ ಎಷ್ಟು ಲಾಸ್ ಆಗುತ್ತಿದೆ ?

ಶ್ರೀ ಕೆ. ಮಲ್ಲಪ್ಪ —ಅದು ಲಾಭ ನಷ್ಟದ ಪ್ರಶ್ನೆಯಲ್ಲ.

ಶ್ರೀ ಗಂಗಾಧರ ನಾಮೋಷಿ.—ಅಲ್ಲಿ ಮೊದಲು ಸರ್ಕಾರದ ಅಫಿಷಿಯಲ್ಸ್ ಇದ್ದಾಗ ಅವರು ಆ ಸಿಮೆಂಟ್ ಕಂಪೆನಿಯ ಕಾನ್‌ಫರೆನ್ಸ್ ಇತ್ಯಾದಿಗಳಿಗೆ ಹೋಗಿಬಂದಾಗ ಆ ಕಂಪೆನಿಯವರು ಸರ್ಕಾರಕ್ಕೆ ಸ್ವಲ್ಪ ಹೆಚ್ಚಿನ ಟಿ.ಎ., ಡಿ.ಎ. ಮತ್ತು ಸಿಟಿಂಗ್ ಫೀಜು ಇತ್ಯಾದಿಗಳನ್ನು ಕಟ್ಟುತ್ತಿದ್ದರು. ಅದರಿಂದ ಸರ್ಕಾರಕ್ಕೆ ಎಷ್ಟೋ ದುಡ್ಡು ಬರುತ್ತಿತ್ತು. ಅಂಥಾ ದುಡ್ಡು ಈಗ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ?

Mr. SPEAKER.—How does it result in profit or loss ?

ಶ್ರೀ ಗಂಗಾಧರ ನಾಮೋಷಿ.—ಆ ಕಂಪೆನಿಯಲ್ಲಿ ಮೀಟಿಂಗ್ ನಡೆದಾಗ ಡೈರೆಕ್ಟರುಗಳಿಗೆ ಒಂದು ದಿವಸಕ್ಕೆ ಸಿಟಿಂಗ್ ಫೀಜು ಎಷ್ಟು ?

Sri K. MALLAPPA.—I have no information about that.

ಶ್ರೀ ಗಂಗಾಧರ ನಾಮೋಷಿ.—ಮೊದಲು ಶ್ರೀ ನಾರಾಯಣಸ್ವಾಮಿಯವರು ಡೈರೆಕ್ಟರಾಗಿದ್ದಾಗ ಅವರು ಆ ಕಂಪೆನಿಗೆ ಹೋಗಿಬಂದದ್ದಕ್ಕೆ ಸರ್ಕಾರದ ರೂಲ್ಸ್ ಪ್ರಕಾರ ಅವರ ಟಿ. ಎ. ಗೋಸ್ಕರ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕೆ. ಮಲ್ಲಪ್ಪ.—ರೂಲ್ಸ್ ಪ್ರಕಾರ ಎಷ್ಟು ಟಿ.ಎ. ಅನ್ನು ಅವರಿಗೆ ಕೊಡಬೇಕೋ ಅಷ್ಟು ಹಣವನ್ನು ಡ್ರಾ ಮಾಡಿ ಅವರಿಗೆ ಕೊಟ್ಟಿದೆ.

———

Tours made by the Administrative Officer, D.S.B., North Kanara during the years 1962 and 1963.

*Q.—339. **Sri B. P. KADAM** (Karwar).—

Will the Government be pleased to state :—

(*a*) the total number of days the Administrative Officer, D.S.B., North Kanara has been on tour during the years of 1962 and 1963 ;

(*b*) the total number of schools he has visited during that period ;